ದಿನಾಂಕಃ **10-02-2022**

ಸಾಕ್ಷಿದಾರರಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ ಜೆ.ಬಿ.ಆರ್. ವಕೀಲರಿಂದಃ**

1 ನೇ ಎದುರುದಾರ ನನ್ನ ಅಣ್ಣ ಇರುತ್ತಾನೆ ಎಂದರೆ ನಿಜ. ಅಪಘಾತವು ದಿನಾಂಕ 09/12/2016 ರಂದು ಆಗಿರುತ್ತದೆ. ದೇವಸ್ಥಾನಕ್ಕೆ ನಮ್ಮ ಊರಿನಿಂದ ಹೊರಟಾಗ ಸಾಯಂಕಾಲ 6 ಗಂಟೆ ಸಮಯವಾಗಿತ್ತು. ಘಟನೆಯ ದಿವಸ 1 ನೇ ಎದುರುದಾರ ನಮ್ಮ ವಾಹನದ ಚಾಲಕನಾಗಿದ್ದು ನಾನು ಹಿಂಬದಿ ಸವಾರನಾಗಿದ್ದೆನು ಎಂದರೆ ನಿಜ. ಅಪಘಾತವಾದಾಗ ರಾತ್ರಿ 10.30 ಸಮಯವಾಗಿತ್ತು. ಅಪಘಾತವಾದ ಸಮಯದಲ್ಲಿ ನಾವಿಬ್ಬರಲ್ಲದೇ ಬೇರೆ ಯಾರೆಲ್ಲ ಸದರಿ ಸ್ಥಳದಲ್ಲಿ ಇದ್ದರು ಎಂದು ನನಗೆ ಜ್ಞಾಪಕ ಇಲ್ಲ. ಅಪಘಾತವು 1 ನೇ ಎದುರುದಾರರ ತಪ್ಪಿನಿಂದ ಆಗಿಲ್ಲ ಬದಲಾಗಿ ಅದು ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿದ್ದ ಕಾರಣ 1 ನೇ ಎದುರುದಾರರಿಂದ ಪರಿಹಾರ ಪಡೆಯಲು ನನಗೆ ಯಾವುದೇ ಅರ್ಹತೆ ಇಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರಿಂದ ಅಕ್ರಮ ಪರಿಹಾರ ಪಡೆಯುವ ಸಂಬಂಧ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಪ್ರಕರಣ ದಾಖಲಿಸಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಕಳೆದ 12 ವರ್ಷಗಳಿಂದ ಮೊಬೈಲ್ ಅಂಗಡಿಯನ್ನು ನಡೆಸುತ್ತಿದ್ದೇನೆ. ಈಗಲೂ ಕೂಡ ನಾನು ಮೊಬೈಲ್ ಅಂಗಡಿಯನ್ನು ನಡೆಸುತ್ತಿದ್ದೇನೆ. ನಾನು ಈಗಲೂ ಕೂಡ ಆರೋಗ್ಯವಾಗಿ ಚನ್ನಾಗಿ ಮತ್ತು ದೃಢಕಾಯನಾಗಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಎದುರುದಾರರ ಪರಃ ಸಮಯಾವಕಾಶವನ್ನು ಕೋರಿದ ಮೇರೆಗೆ ಮುಂದೂಡಲಾಯಿತು.**

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ
ತಿ. ನರಸೀಪುರ.